0104/2044/0523

**I Semester 3 Year LL.B./V Semester 5 Year B.A. LL.B. (Maj.-Min. System)/ V Semester 5 Year B.A. LL.B./B.B.A. LL.B. Examination, November/December 2020**

# FAMILY LAW – I

## Hindu Law

## (Old and New Batch)

Duration : 3 Hours Max. Marks : 100

**Instructions : 1. Answer Q. No. 9 and any five of the remaining questions.**

**2. Q. No. 9 carries 20 marks and the remaining questions carry 16 marks each.**

**3. Answer should be written either in English or Kannada only.**

ಸೂಚನೆಗಳು : 1. ಪ್ರಶ್ನೆ ಸಂಖ್ಯೆ 9 ಹಾಗೂ ಉಳಿದ ಯಾವುದಾದರೂ 5ಕ್ಕೆ ಉತ್ತರಿಸಿರಿ.

2. ಪ್ರಶ್ನೆ ಸಂಖ್ಯೆ 9ಕ್ಕೆ 20 ಅಂಕಗಳು ಮತ್ತು ಉಳಿದ ಪ್ರತಿ ಪ್ರಶ್ನೆಗಳಿಗೆ 16 ಅಂಕಗಳು.

3. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಭಾಷೆಯಲ್ಲಿ ಅಥವಾ ಕನ್ನಡದಲ್ಲಿಯೇ ಉತ್ತರಿಸಿರಿ.

Q. No. 1. Explain the various sources of Hindu Law. Marks : 16

ಹಿಂದೂ ಕಾನೂನಿನ ವಿವಿಧ ಮೂಲಗಳನ್ನು ವಿವರಿಸಿ.

Q. No. 2. Discuss various grounds for Divorce under the Hindu Marriage Act, 1955. Marks : 16

ಹಿಂದೂ ವಿವಾಹ ಅಧಿನಿಯಮ 1955ರ ಅಡಿಯಲ್ಲಿ ವಿವಾಹ ವಿಚ್ಛೇದನಕ್ಕೆ ಇರುವ ವಿವಿಧ ಆಧಾರಗಳನ್ನು ಚರ್ಚಿಸಿ.

Q. No. 3. State the incidents of Hindu Joint Family property and self acquired property. Marks : 16

ಹಿಂದೂ ಅವಿಭಕ್ತ ಕುಟುಂಬದ ಸ್ವತ್ತು ಮತ್ತು ಸ್ವಯಾರ್ಜಿತ ಸ್ವತ್ತಿನ ಲಕ್ಷಣಗಳನ್ನು ತಿಳಿಸಿರಿ.

Q. No. 4. Examine the rules of succession of a female intestate under the Hindu Succession Act, 1956. Marks : 16

ಹಿಂದೂ ವಾರಸ ಅಧಿನಿಯಮ, 1956ರ ಅಡಿಯಲ್ಲಿ ಮೃತ್ಯು ಪತ್ರ ಮಾಡದ ಮಹಿಳೆಯ ಉತ್ತರಾಧಿಕಾರದ ನಿಯಮಗಳನ್ನು ಪರೀಕ್ಷಿಸಿರಿ.

Q. No. 5. When court may appoint and remove the guardian ? Explain the powers of guardian appointed by the court. Marks : 16

ಯಾವಾಗ ನ್ಯಾಯಾಲಯವು ಸಂರಕ್ಷಕರನ್ನು ನೇಮಕ ಮಾಡಬಹುದು ಮತ್ತು ತೆಗೆದು ಹಾಕಬಹುದು ? ನ್ಯಾಯಾಲಯ ನೇಮಕ ಮಾಡಿದ ಸಂರಕ್ಷಕನ ಅಧಿಕಾರಗಳನ್ನು ವಿವರಿಸಿರಿ.

Q. No. 6. Who may be adopted ? Explain the effects of adoption under the Hindu Adoptions and Maintenance Act, 1956. Marks : 16

ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956ರಂತೆ ಯಾರನ್ನು ದತ್ತು ತೆಗೆದುಕೊಳ್ಳಬಹುದು ? ದತ್ತಕದ ಪರಿಣಾಮಗಳನ್ನು ವಿವರಿಸಿರಿ.

Q. No. 7. Explain the circumstances under which a Hindu wife can live separately from her husband and claim maintenance under the Hindu Adoptions and Maintenance Act, 1956. Marks : 16

ಹಿಂದೂ ದತ್ತಕ ಮತ್ತು ಜೀವನಾಂಶದ ಅಧಿನಿಯಮ, 1956ರ ಅಡಿಯಲ್ಲಿ ಹಿಂದೂ ಪತ್ನಿಯು ಯಾವ ಸಂದರ್ಭಗಳಲ್ಲಿ ತನ್ನ ಪತಿಯಿಂದ ಪ್ರತ್ಯೇಕವಾಗಿ ವಾಸಿಸಬಹುದು ಮತ್ತು ಜೀವನಾಂಶವನ್ನು ಪಡೆಯಬಹುದು.

Q. No. 8. Write a short note on **any two** of the following : Marks : 2×8=16

ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ :

(a) Dharma

ಧರ್ಮ

(b) Valid Marriage

ಊರ್ಜಿತ ವಿವಾಹ

(c) Re-opening of Partition

ವಿಭಾಗದ ಪುನರ್ ನಿರ್ಧರಣೆ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳನ್ನು ಪರಿಹರಿಸಿರಿ :

(a) 'A' a male Hindu dies intestate leaving behind him his two widows 'X' and 'Y'; two daughters 'M' and 'N'; one son 'E'; mother 'K' and father 'H'. Distribute the property among them and give reasons.

'A' ಎಂಬ ಹಿಂದೂ ಪುರುಷನು ಉಯಿಲು ಪತ್ರವನ್ನು ಮಾಡದೇ ಆಸ್ತಿಯನ್ನು ಬಿಟ್ಟು 'X' ಮತ್ತು 'Y' ಎಂಬ ಇಬ್ಬರು ವಿಧವೆ ಪತ್ನಿಯರನ್ನು; 'M' ಮತ್ತು 'N' ಎಂಬ ಇಬ್ಬರು ಮಗಳಂದಿರನ್ನು; 'E' ಎಂಬ ಒಬ್ಬ ಮಗನನ್ನು; 'K' ಎಂಬ ತಾಯಿಯನ್ನು 'H' ಎಂಬ ತಂದೆಯನ್ನು ಬಿಟ್ಟು ತೀರಿಕೊಳ್ಳುತ್ತಾನೆ. ಇವರುಗಳ ನಡುವೆ ಸ್ವತ್ತನ್ನು ಹಂಚಿರಿ ಮತ್ತು ಕಾರಣಗಳನ್ನು ನೀಡಿರಿ.

(b) One unmarried Hindu women named Hima aged 25 years has adopted a 14 years old boy by name Raja. Is this adoption valid ? Give reasons.

ಹಿಮ ಎಂಬ 25 ವರ್ಷದ ಅವಿವಾಹಿತ ಹಿಂದೂ ಮಹಿಳೆಯು 14 ವರ್ಷದ ರಾಜು ಎಂಬ ಹೆಸರಿನ ಬಾಲಕನನ್ನು ದತ್ತು ತೆಗೆದುಕೊಳ್ಳುತ್ತಾಳೆ. ಈ ದತ್ತಕ ಸಿಂಧುವೇ ? ಕಾರಣಗಳನ್ನು ತಿಳಿಸಿರಿ.

(c) 'A' and 'B' a husband and wife had a minor son 'C'. 'A' makes a will appointing his brother 'D' as the guardian of his son 'C' and dies. Both 'B' and 'D' claim right of guardianship of 'C'. Decide.

'ಎ' ಮತ್ತು 'ಬಿ'ಯೆಂಬ ಗಂಡ ಮತ್ತು ಹೆಂಡತಿಯರಿಗೆ 'ಸಿ'ಯೆಂಬ ಅಪ್ರಾಯಸ್ಥ ಮಗನಿರುತ್ತಾನೆ. 'ಎ'ನು ತನ್ನ ಸಹೋದರ 'ಡಿ'ಯನ್ನು ತನ್ನ ಮಗನಾದ 'ಸಿ'ಗೆ ರಕ್ಷಕನಾಗಿ ಮರಣಶಾಸನದ ಮೂಲಕ ನೇಮಿಸುತ್ತಾನೆ ಮತ್ತು ಆನಂತರ ಮರಣಿಸುತ್ತಾನೆ. ಈಗ 'ಬಿ' ಮತ್ತು 'ಡಿ' ಇಬ್ಬರೂ 'ಸಿ'ಯ ಮೇಲೆ ರಕ್ಷಕತನ ಹಕ್ಕನ್ನು ಮಂಡಿಸುತ್ತಾರೆ. ನಿರ್ಧರಿಸಿರಿ.